# ವಾಸ್ತುಶಿಲ್ಪದಲ್ಲಿ ಸಮನ್ವಯ—ಬೇಲೂರಿನ ರಾಮಕೃಷ್ಣ ದೇವಾಲಯ

❑ ಸ್ವಾಮಿ ತತ್ತ್ವಜ್ಞಾನಾನಂದ

**ಶ್ರೀರಾಮಕೃಷ್ಣರ ಸಮನ್ವಯ ಭಾವದ ಮೂರ್ತರೂಪದಂತಿರುವ ಬೇಲೂರಿನ ರಾಮಕೃಷ್ಣ ದೇವಾಲಯದ ವಾಸ್ತುಶಿಲ್ಪದ ವಿವರಣೆಯನ್ನು ಈ ಲೇಖನ ನೀಡುತ್ತದೆ. ಪ್ರಬುದ್ಧ ಭಾರತದ ೧೯೯೮, ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಮೂಲ ಆಂಗ್ಲ ಲೇಖನದ ಕನ್ನಡಾನುವಾದವನ್ನು ಮಾಡಿರುವವರು ಡಾ. ಎಚ್. ಪಾಂಡುರಂಗ ವಿಠಲ ಅವರು.**

**ಬೇ**ಲೂರುಮಠದಲ್ಲಿನ ರಾಮಕೃಷ್ಣ ದೇವಾಲಯ—ಒಂದು ಅಂತಾರಾಷ್ಟ್ರೀಯ ತೀರ್ಥಕ್ಷೇತ್ರ. ವಿವೇಕಾನಂದರು ತಾವು ಯೋಜಿಸಿದ ಸುಂದರ ದೇವಾಲಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಚಿತಾಭಸ್ಮವನ್ನು ತಾವೇ ಇರಿಸಿದರೆಂಬುದು ಇಲ್ಲಿನ ವಿಶೇಷ. ಚಿಕಾಗೋದ ಪ್ರಸಿದ್ಧಿಗೆ ಮುನ್ನ ಅವರು ಭಾರತದ ಉನ್ನತಿಯ ಕುರುಹುಗಳು ಹಾಗೂ ಈ ಪುರಾತನ ಸಂಸ್ಕೃತಿಯ ಈಗಿನ ದುಃಸ್ಥಿತಿಯ ಕಾರಣಗಳನ್ನು ಅರಿಯಲು ಇತಿಹಾಸಪ್ರಸಿದ್ಧ ಸ್ಥಳಗಳನ್ನೆಲ್ಲ ಪರಿಕ್ರಮಿಸಿದ್ದರು. ಉತ್ತರಪ್ರದೇಶ, ದಿಲ್ಲಿ, ರಾಜಾಸ್ಥಾನ್, ಗುಜರಾತ್, ಮಹಾರಾಷ್ಟ್ರ, ಕೇರಳ, ಕರ್ನಾಟಕ, ತಮಿಳ್ನಾಡುಗಳಿಗೆ ಪರಿವ್ರಾಜಕರಾಗಿ ಅವರು ಹೋಗಿದ್ದಾಗ ನೋಡಿದ ತಾಜ್ ಮಹಲ್, ಫತೇಪುರ್ ಸಿಕ್ರಿ, ರಾಜಸ್ಥಾನದ ದಿವಾನ್ ಇ ಆಮ್ ಮಹಲುಗಳಂತಹ ಐತಿಹಾಸಿಕ ನಿರ್ಮಾಣಗಳ ವಿಶೇಷತೆಯನ್ನು ತಮ್ಮ ಮನದಲ್ಲಿ ಸವಿಸ್ತಾರವಾಗಿ ದಾಖಲಿಸಿಕೊಂಡಿರಬೇಕು. ಅಮೆರಿಕಾ ಯೂರೋಪ್‌ಗಳ ತಮ್ಮ ಪ್ರವಾಸದಲ್ಲಿ ಪ್ರಾಚೀನ ಹಾಗೂ ನವೀನ ವಾಸ್ತುಶಿಲ್ಪಕ್ಕೆ, ನವೋದಯ ಯುಗಕ್ಕೆ ಹಾಗೂ ಗಾಥಿಕ್ ಶೈಲಿಗಳಿಗೆ ಹೆಸರಾದ ಅನೇಕ ಕಟ್ಟಡಗಳನ್ನು ಕಂಡಿರಬೇಕು. ಶ್ರೀರಾಮಕೃಷ್ಣರ ಭಾವವೈವಿಧ್ಯ ಮತ್ತು ಸಾರ್ವತ್ರಿಕ ದೃಷ್ಟಿಯನ್ನು ಪ್ರತಿನಿಧಿಸುವ ಪ್ರಪಂಚದ ವಿವಿಧ ಸ್ಮಾರಕಗಳ ಅಂಶಗಳನ್ನು ಒಳಗೊಂಡ ಭವನವೊಂದರ ನಿರ್ಮಾಣವನ್ನು ಅವರು ಕಲ್ಪಿಸಿದರು. ಕಲ್ಕತ್ತದಲ್ಲಿ ಆಗಿನ ಹೆಸರಾಂತ ವಾಸ್ತುಶಿಲ್ಪ ನಿರ್ಮಾಣಕಾರರಾಗಿದ್ದ ಮಾರ್ಟಿನ್ ಬರ್ನ್ ಮತ್ತು ಕಂಪನಿಯ ಸಹಾಯದಿಂದ ಈ ಕಲ್ಪನೆಗೆ ಮೂರ್ತರೂಪವನ್ನು ಕೊಟ್ಟವರು ಸ್ವಾಮಿ ವಿಜ್ಞಾನಾನಂದರು. ಮಾರ್ಟಿನ್ ಬರ್ನ್ ಮತ್ತು ಕಂಪನಿಯ ಹೆರಾಲ್ಡ್ ಬೌನ್ ಸ್ವಾಮಿ ವಿಜ್ಞಾನಾನಂದರ ಜೊತೆ ಚರ್ಚಿಸಿ, ನಕ್ಷೆಗಳನ್ನು ತಯಾರಿಸುವಾಗ, ಈ ಸ್ಮಾರಕದಲ್ಲಿ ಇರಬೇಕೆಂದು ಸ್ವಾಮಿ ವಿವೇಕಾನಂದರು ಯೋಚಿಸಿದ್ದ ಮೂರು ಮುಖ್ಯ ಅಂಶಗಳನ್ನು ಪರಿಗಣಿಸಿದರು:

(೧) ನಾಟ್ಯಮಂದಿರ (ಆರಾಧನಾ ಸಭಾಂಗಣ) ಮತ್ತು ಗರ್ಭಮಂದಿರಗಳು ಹಿಂದೂ ದೇವಾಲಯಗಳಲ್ಲಿ ಇರುವಂತೆ ಬೇರೆ ಬೇರೆಯಾಗಿರದೆ ಕ್ರಿಶ್ಚಿಯನ್ನರ ಚರ್ಚುಗಳಲ್ಲಿ ಇರುವಂತೆ ಏಕವಾಗಿರಬೇಕು.

(೨) ಗರ್ಭಮಂದಿರದ ಮೇಲೆ ಗುಮ್ಮಟಾಕಾರದ ಮೇಲ್ಛಾವಣಿ ಇರಬೇಕು.

(೩) ವಾಸ್ತುಶಿಲ್ಪದ ಉಳಿದ ಅಂಶಗಳು ಹಿಂದೂ ದೇವಾಲಯಗಳಂತೆ ಇರಬೇಕು.


## ಆವರಣ

ಬೇಲೂರುಮಠದ ಗೇಟನ್ನು ದಾಟಿ, ಸಂದರ್ಶಕರು ದೇವಾಲಯದತ್ತ ಟಾರ್ ರಸ್ತೆಯಲ್ಲಿ ಹೋಗುವಾಗ ನೂರು ಮೀಟರುಗಳವರೆಗೆ ಕಟ್ಟಡ ಕಾಣದಂತೆ ಹಳೆಯ ಮರಗಳು ತೆರೆ ರಚಿಸಿವೆ. ದೇವಾಲಯಕ್ಕೆಂದು ಸ್ವಾಮೀಜಿ ಯೋಜಿಸಿದ ಸ್ಥಳವು ಗಂಗೆಯ ದಂಡೆಯಲ್ಲಿದ್ದು, ಇಲ್ಲಿಂದ ಶ್ರೀರಾಮಕೃಷ್ಣರ ಲೀಲಾಕ್ಷೇತ್ರದ ಪ್ರಮುಖ ಸ್ಥಳಗಳಾದ ದಕ್ಷಿಣೇಶ್ವರ ಮತ್ತು ಕಾಶೀಪುರಗಳು ಚೆನ್ನಾಗಿ ಕಾಣುತ್ತ ಇಲ್ಲಿನ ಪಾವಿತ್ರ್ಯವನ್ನು ಹೆಚ್ಚಿಸಿವೆ. ಗಂಗೆಗೆ ವಿಶೇಷ ಗೌರವ ಸಲ್ಲಿಸುವಂತೆ ಅದರ ಹರಿವಿಗೆ ಸಮಾನಾಂತರವಾಗಿ, ಉಬ್ಬರದಲ್ಲೂ ನದಿಯ ನೀರು ಸೋಂಕದಷ್ಟು ದೂರದಲ್ಲಿ ದೇವಾಲಯ ಕಟ್ಟಲ್ಪಟ್ಟಿದೆ. ದೇವಾಲಯದ ಎರಡು ಪಕ್ಕಗಳಲ್ಲೂ ವಿಸ್ತಾರವಾದ ಹಸಿರು ಪ್ರದೇಶವಿದೆ. ಹಿಂಭಾಗದಲ್ಲಿ ಮಠದ ಕಾರ್ಯಾಲಯ ಇರುವ ಸರಳ ಉದ್ದ ಕಟ್ಟಡ, ಮಠದ ಗ್ರಂಥಾಲಯ, ಸಂನ್ಯಾಸಿ ಆವಾಸಗಳು ಈ ಆವರಣವನ್ನು ಪೂರ್ತಿಗೊಳಿಸುತ್ತವೆ. ಸನಿಹದಲ್ಲೇ ಹಳೆಯ ದೇವಸ್ಥಾನವಿದೆ. ಅದರ ಪಕ್ಕದಲ್ಲೇ ವಿವೇಕಾನಂದರು ಕೊನೆಗಾಲದಲ್ಲಿ ವಾಸಿಸುತ್ತಿದ್ದ ಕೊಠಡಿಯಿಂದಲೂ ರಾಮಕೃಷ್ಣರ ಇತರ ಶಿಷ್ಯರು ಉಪಯೋಗಿಸುತ್ತಿದ್ದ ಕೊಠಡಿಗಳಿಂದಲೂ ಕೂಡಿರುವ, ಈಗ ಸ್ವಲ್ಪ ಬದಲಾವಣೆಗೆ ಒಳಗಾಗಿರುವ ಕಟ್ಟಡವಿದೆ. ದೇವಾಲಯದ ಎಡಭಾಗಕ್ಕೆ ಗಂಗೆಯ ಸಮೀಪದಲ್ಲಿ ಸ್ವಾಮಿ ಬ್ರಹ್ಮಾನಂದ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ದೇವಾಲಯಗಳಿವೆ.

ಮಹಾದ್ವಾರದಿಂದ ದೇವಾಲಯಕ್ಕೆ ಹೋಗುವ ಮಾರ್ಗ ಸರಳವೂ ಮನೋಹರವೂ ಆಗಿದ್ದು, ಇಕ್ಕೆಲಗಳಲ್ಲೂ ಮರಗಿಡಗಳಿಂದ ಕೂಡಿದೆ. ವಿಶಾಲ, ಪವಿತ್ರ ಗಂಗಾನದಿಯು, ಆವರಣದ ಪಾವಿತ್ರ್ಯವನ್ನು ಹೆಚ್ಚಿಸುವುದರೊಂದಿಗೆ, ಘನಗಂಭೀರ ವಾತಾವರಣವನ್ನು ನಿರ್ಮಿಸಿದೆ. ಗಂಗೆಯ ಆಚೆಯ ದಡದಿಂದ ಮೂಡಿಬರುವ ದಿವಾಕರನ ಹೊಂಗಿರಣ ದೇವಾಲಯದ ಸೊಬಗನ್ನು ಇಮ್ಮಡಿಗೊಳಿಸುತ್ತದೆ.

## ದೇವಾಲಯ

ಒಂದೂಮುಕ್ಕಾಲು ಮೀಟರು ಎತ್ತರದ ಸರಳ ಸುಂದರವಾದ ಪೀಠದ ಮೇಲೆ ದೇವಾಲಯವಿದೆ. ದೇವಾಲಯವು ಮುಖ್ಯವಾಗಿ ಸುಣ್ಣಕಲ್ಲಿನಿಂದಲೂ, ಕೆಲವು ಭಾಗ ಮಾತ್ರ ಕಾಂಕ್ರೀಟಿನಿಂದಲೂ ಕಟ್ಟಲ್ಪಟ್ಟಿದೆ. ಚಕ್ರವರ್ತಿ ಅಶೋಕನ ಕಾಲದಿಂದಲೂ ಉತ್ತರ



ಭಾರತದಲ್ಲಿ, ವಿಶೇಷವಾಗಿ ಖಜುರಾಹೋ ದೇವಾಲಯಗಳಲ್ಲಿ ಮತ್ತು ರಾಜಾಸ್ಥಾನದ ಅರಮನೆಗಳಲ್ಲಿ, ಈ ಕಲ್ಲನ್ನು ಉಪಯೋಗಿಸಲಾಗಿದೆ. ಕಂದು ಬಣ್ಣದ, ದೀರ್ಘ ತಾಳಿಕೆಯ ಈ ಕಲ್ಲು ಸೂಕ್ಷ್ಮ ಕೆತ್ತನೆಗೆ ಸರಿಹೋಗುವಷ್ಟು ಮೃದುವಾಗಿದೆ. ದೇವಾಲಯದ ನೆಲಭಾಗಕ್ಕೆ ಅಮೃತಶಿಲೆಯ ಕಲ್ಲನ್ನು ಬಳಸಲಾಗಿದೆ.

## ಪ್ರವೇಶದ್ವಾರ

ದಕ್ಷಿಣ ಭಾರತದ ದೇವಾಲಯಗಳಲ್ಲಿನ ಉನ್ನತ ಪ್ರವೇಶ ಗೋಪುರಗಳಂತೆ ಇಲ್ಲಿನ ಪ್ರವೇಶದ್ವಾರವಿದ್ದು, ದೇವಾಲಯದ ಮುಂದೆ ನಿಂತ ಪ್ರೇಕ್ಷಕನನ್ನು ಚಕಿತಗೊಳಿಸುತ್ತದೆ. ವ್ಯತ್ಯಾಸವೆಂದರೆ ದಕ್ಷಿಣದ ಗುಡಿಯು ಗೋಪುರದಿಂದ ಸಾಕಷ್ಟು ದೂರವಿದ್ದರೆ ಇಲ್ಲಿ ಈ ವಿಸ್ತಾರ ಗೋಪುರ ದೇವಾಲಯಕ್ಕೆ ಅಂಟಿಕೊಂಡಿದೆ. ಇದರಲ್ಲಿ ದೊಡ್ಡ ಕಮಾನುಗಳು, ಛತ್ರಿಗಳು ಇದ್ದು, ಹಿಂದಿರುವ ನಾಟ್ಯಮಂದಿರವನ್ನು ಕುಬ್ಜಗೊಳಿಸುವಂತಹ ಅಗಲವೂ ಎತ್ತರವೂ ಆದ ಗುಮ್ಮಟಗಳಿಂದ ಕೂಡಿದೆ.

ಈ ಪ್ರವೇಶದ್ವಾರದ ಅಂಗಗಳು ಪ್ರಾಚೀನ ಭಾರತೀಯ ವಾಸ್ತುಶಿಲ್ಪದ ವಿವಿಧ ಹಂತಗಳನ್ನು ನೆನಪಿಗೆ ತರಿಸುತ್ತವೆ. ಮೇಲಿನ ಅಲಂಕಾರ ಮಂಟಪಗಳು ಉದಯಪುರ, ಜೋಧಪುರದ ಅರಮನೆಗಳ ಬಾಹ್ಯರೇಖೆಗಳ ರಚನೆಯನ್ನು ಹೋಲುತ್ತವೆ; ಆದರೆ ಚಜ್ಜಾಗಳ ಬಾಗು ಬಂಗಾಳೀ ದೇವಾಲಯಗಳಲ್ಲಿ ಸಾಮಾನ್ಯ.

ಗೋಪುರಮಧ್ಯದ ಅಲಂಕಾರಮಂಟಪದ ಮೂರು ಚಾಚು ಕಮಾನುಗಳು ಕೆಳಗಿರುವ ದೊಡ್ಡ ಕಮಾನಿಗೆ ಸುಂದರವಾಗಿ ಸರಿಹೊಂದುತ್ತವೆ. ಪ್ರವೇಶದ್ವಾರ ಹಾಗೂ ಅದರ ಮೇಲಿನ ಕುದುರೆ ಲಾಳಾಕಾರದ ಕಮಾನಿಗೆ ಈ ದೊಡ್ಡ ಕಮಾನು ಹೊಂದಿಕೆಯಾಗಿದೆ. ಮಹಾರಾಷ್ಟ್ರದ ನಾಸಿಕ್, ಕೊಂಡಾನೆ ಅಥವಾ ಅಜಂತಾದ ಗುಹಾ ದೇವಾಲಯಗಳ ಪ್ರವೇಶದ್ವಾರದ ರಚನೆಯನ್ನು ಇವು ಹೋಲುತ್ತವೆ.

ಎರಡು ಜೋಡಿ ಗೋಡೆಗಂಬಗಳನ್ನು ಆಧರಿಸಿದ ಕುದುರೆ ಲಾಳಾಕಾರದ ಕಮಾನು ಸಾಂಚಿ ಸ್ತೂಪದ ಬಾಗಿಲಿನಂತೆ ಸುರುಳಿ ಸುತ್ತಿದ ಕೊನೆಗಳನ್ನು ಹೊಂದಿದೆ—ಈ ಸುರುಳಿಯು ಶಾಸ್ತ್ರದ ಪ್ರತೀಕ. ಕಮಾನಿನೊಳಗೆ ರಾಮಕೃಷ್ಣ ಮಠ, ರಾಮಕೃಷ್ಣ ಮಿಷನ್‌ನ ಲಾಂಛನದ ಉಬ್ಬುಚಿತ್ರವನ್ನು ಚೆನ್ನಾಗಿ ಹೊಂದಿಸಲಾಗಿದೆ. ನಂದಲಾಲ ಬೋಸರಿಂದ ಕೆತ್ತಲ್ಪಟ್ಟಿರುವ ಹಿಂದೂ ಧಾರ್ಮಿಕ ಪ್ರತೀಕಗಳಾದ ಆನೆ, ಕಮಲಗಳು, ಒಂದು ಶಿವಲಿಂಗ ಪ್ರವೇಶದ್ವಾರವನ್ನು ಅಲಂಕರಿಸಿವೆ. ಹಳೆಯ ಮೊಘಲ್ ಕೋಟೆಗಳ ಸಣ್ಣ ಹೊರರಕ್ಷಣಾ ಬುರುಜುಗಳನ್ನು ನೆನಪಿಸುವಂತಹ ಗುಮ್ಮಟಗಳನ್ನು ಹೊಂದಿದ ಚಾಚು ಚೌಕಗಳು ಮೇಲಿವೆ. ಮೊಘಲ್ ಹಾಗೂ ರಜಪೂತ ಅರಮನೆಗಳಲ್ಲಿಯಂತೆ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಕಿಟಕಿಗಳಿವೆ. ಒಟ್ಟಿನಲ್ಲಿ ಕಮಾನುಗಳು, ಅಲಂಕಾರ ಮಂಟಪಗಳಿಂದ ಕೂಡಿದ ಮೂರುಸ್ತರಗಳ ಪ್ರವೇಶ ದ್ವಾರದ ರಚನೆಯು ಮನಸೆಳೆಯುವಂತಿದೆ.


## ಒಳಾಂಗಣ

ಪ್ರವೇಶದ್ವಾರದಿಂದ ಒಳ ನಡೆದಾಗ, ಇಕ್ಕೆಲಗಳ ಕಂಬಗಳ ಸಾಲು ನಮ್ಮ ದೃಷ್ಟಿಯನ್ನು ತಗ್ಗಿಸಿ, ಕೊನೆಯಲ್ಲಿ ಪೀಠಸ್ಥವಾಗಿರುವ ಆರಾಧನಾಮೂರ್ತಿಯೆಡೆ ಕೇಂದ್ರೀಕೃತಗೊಳಿಸುತ್ತದೆ. ಇಲ್ಲಿನ ಕಮಾನುಚಾವಣಿಯನ್ನು ಹೊತ್ತಿರುವ ದೀರ್ಘಸ್ತಂಭಗಳು ಮಹಾರಾಷ್ಟ್ರದ ಕಾರ್ಲೆ ಮತ್ತು ಪಶ್ಚಿಮ ಘಟ್ಟಗಳಲ್ಲಿನ ಕೊಂಡಾಣೆಯಲ್ಲಿಯ ಬೌದ್ಧ ಚೈತ್ಯದ ಒಳಾಂಗಣವನ್ನು ನೆನಪಿಸುತ್ತವೆ. ಆದರೆ ಬಂಡೆಗಲ್ಲನ್ನು ಕೊರೆದು ಮಾಡಿರುವ ಮಂಕುಗವಿದ ಚೈತ್ಯಗಳಿಗಿಂತ ಇಲ್ಲಿ ದೂರ ದೂರ ನಿಲ್ಲಿಸಲ್ಪಟ್ಟ ಕಂಬಗಳು ಮತ್ತು ಅವುಗಳ ವಿನ್ಯಾಸ ಚೇತೋಹಾರಿಯಾಗಿವೆ.

ವಿಸ್ತಾರವಾದ ಮಧ್ಯಾಂಗಣ, ಇಕ್ಕಟ್ಟಾದ ಇಕ್ಕೆಲದ ಹಜಾರಗಳು, ಒಂದಾದ ಮೇಲೊಂದು ಬರುವ ಮಾಡ ಹಾಗೂ ಕಿಟಕಿಗಳು ಮತ್ತು ನಾಟ್ಯಮಂದಿರಕ್ಕೆ ಸೇರಿಕೊಂಡ ಗರ್ಭಗುಡಿ ಇವು ನಕ್ಷೆಯಲ್ಲಿ ಕ್ರಿಶ್ಚಿಯನ್ ಚರ್ಚ್‌ಅನ್ನು ಹೋಲುತ್ತವೆ. ಆದರೆ ಆರಾಧನಾಮಂದಿರದ ಕಮಾನುಮೇಲ್ಛಾವಣಿಯು ಛಾಯಾ-ಪ್ರಕಾಶದ ಶೋಭೆಯೊಂದಿಗೆ ಕಾರ್ಲೆಯ ಚೈತ್ಯದ ಮರದ ಮೇಲ್ಛಾವಣಿಯ ರಚನೆಯನ್ನು ನೆನಪಿಗೆ ತರುತ್ತದೆ. *(ಮುಖಪುಟ ನೋಡಿ)*

## ಸ್ತಂಭಗಳು


ನಾಟ್ಯಮಂದಿರದ ಒಳಭಾಗದಲ್ಲಿ ಪ್ರವೇಶದ್ವಾರದ ಶೋಭೆಯನ್ನು ಹೆಚ್ಚಿಸುವಂತೆ ಎರಡು ಬದಿಗಳಲ್ಲಿ ಎರಡು ಜೋಡಿ ಕಂಬಗಳಿವೆ. ಅನಂತರ ಏಕಸ್ತಂಭಗಳ ಉದ್ದನೆಯ ಸಾಲು. ಈ ಕಂಬಗಳಿಗೆ ಚೌಕಾಕಾರದ ಎತ್ತರದ ಪೀಠ, ಎಂಟು ಮುಖಗಳ ದಿಂಡು ಹಾಗೂ ಆಲಂಕಾರಿಕ ಬೋದಿಗೆಗಳಿವೆ. ಒರಿಸ್ಸಾ ದೇವಾಲಯದ ಕಂಬಗಳ ಬೋದಿಗೆಯ ತುದಿಯ ಆಲಂಕಾರಿಕ ಗುಂಭ ಹಾಗೂ ತುದಿಗಳ ಗಂಟೆಗಳನ್ನು ಇಲ್ಲಿನ ಬೋದಿಗೆಯ ಅಲಂಕಾರ



ನೆನಪಿಗೆ ತರುತ್ತದೆ. ಬೋದಿಗೆಯ ಮೇಲಿನ ದೂಲವು ಅಲಂಕಾರಿಕ ಗುಜ್ಜು-ಬಿಂಕಗಳನ್ನು ಆಧರಿಸಿದೆ. ಇವು ದಕ್ಷಿಣ ಭಾರತದ ದೇವಾಲಯದ ಬೋದಿಗೆ, ಬಿಂಕಗಳನ್ನು ಹೋಲುತ್ತವೆ. ಈ ಗುಜ್ಜು ಬಿಂಕಗಳ ಮೇಲಿನ ಮೊಗಸಾಲೆಯು (balcony) ಫತೇಪುರ್ ಸಿಕ್ರಿಯಲ್ಲಿರುವಂತೆಯೇ ಇದೆ.

## ಗರ್ಭಗುಡಿ

ಹಿಂದೂ ದೇವಾಲಯಗಳಲ್ಲಿ ಇರುವಂತೆ ಪೂರ್ತಿಕತ್ತಲೆ ಅಥವಾ ತುಂಬ ಕಡಿಮೆ ಬೆಳಕು ಇಲ್ಲದೆ ಇಲ್ಲಿನ ಗರ್ಭಗುಡಿಗೆ ಹೆಚ್ಚಿನ ಬೆಳಕು ಹಾಗೂ ವಾತಾಯನ ವ್ಯವಸ್ಥೆಯಿದೆ. ಮುಸ್ಲಿಂ ದಾಳಿಕಾರರಿಂದಾಗಿ ಹಳೆಯ ದೇವಾಲಯಗಳು ಸುಭದ್ರತೆಗಾಗಿ, ಅಲ್ಪ ತೆರಪಿನ ಗರ್ಭಗುಡಿ ಹೊಂದಿದ್ದವು. ವಿನಯದ ಭಾವನೆ ಸೃಷ್ಟಿಸಲು ಹಾಗೂ ರಕ್ಷಣೆಯ ದೃಷ್ಟಿಯಿಂದಲೂ ಇವಕ್ಕೆ ತೀರ ಸಣ್ಣ ಬಾಗಿಲುಗಳಿದ್ದವು. ಎಲ್ಲವನ್ನೂ ಒಳಗೊಳ್ಳುವುದು ಶ್ರೀರಾಮಕೃಷ್ಣಧರ್ಮ;



ಲಕ್ಷಾಂತರ ಜನ ಯಾವ ಅಡೆತಡೆ ಇಲ್ಲದೆ ಗರ್ಭಗುಡಿಯನ್ನು ಉಪಯೋಗಿಸುವರು ಎಂಬುದನ್ನು ವಿವೇಕಾನಂದರು ಮನಗಂಡಿದ್ದರು. ಗರ್ಭಗುಡಿಯ ಗೋಡೆಯ ಒಳಭಾಗಕ್ಕೂ ನಾಟ್ಯಮಂದಿರದ ಕಡೆಗಿರುವ ಗೋಡೆಯ ಭಾಗಕ್ಕೂ ಹಾಕಿರುವ ಅಚ್ಚ ಬಿಳಿಬಣ್ಣವು ಸಭಾಂಗಣದ ತಿಳಿಕಂದು ಬಣ್ಣದಲ್ಲಿ ಎದ್ದುಕಾಣುತ್ತದೆ. ಇಲ್ಲಿನ ಕಮಾನುಗಳು ಮತ್ತು ಜಾಲಂದರಗಳು ಆಗ್ರಾದ ಮುಘಲ್ ದಿವಾನ್-ಇ-ಆಮ್‌ನ್ನು ನೆನಪಿಗೆ ತರುತ್ತವೆ. ಶಿಲ್ಪಿ ಶ್ರೀ ಗೋಪೇಶ್ವರ ಪಾಲ್‌ರು ಬಿಳಿ ಅಮೃತಶಿಲೆಯಲ್ಲಿ ಕೆತ್ತಿದ ಶ್ರೀರಾಮಕೃಷ್ಣರ ಸುಂದರ ಪ್ರತಿಮೆಯು ನೆರಳು-ಬೆಳಕುಗಳ ಲಾಸ್ಯದ ಮಧ್ಯೆ ವಿವಿಧ ಭಾವಗಳನ್ನು ಹೊರಹೊಮ್ಮಿಸುವಂತಿದೆ. ನಂದಲಾಲ ಬಸು ರಚಿಸಿದ ಡಮರು ಆಕಾರದ ಸಾಲಂಕೃತ ಪೀಠದ ಮೇಲೆ ಇರುವ ಪೂರ್ಣ ಅರಳಿದ ಕಮಲದ ಮೇಲೆ ಈ ಪ್ರತಿಮೆಯನ್ನು ಇರಿಸಲಾಗಿದೆ. ಎಲ್ಲೋರದ ಕೈಲಾಸ ದೇವಾಲಯದಲ್ಲಿನ ಲಕ್ಷ್ಮಿ, ಕನ್ಹೇರಿಯಲ್ಲಿನ ಬುದ್ಧ ಪ್ರತಿಮೆಯ ಕಮಲ ಪೀಠದ ಭಾವವನ್ನೇ ಇದು ಪ್ರತಿಬಿಂಬಿಸುತ್ತದೆ. ಈ ಪದ್ಮಾಸನ ಯೌಗಿಕ ಧ್ಯಾನದ ಸಂಕೇತ.

ಗರ್ಭಗುಡಿ ಮತ್ತು ನಾಟ್ಯಮಂದಿರಗಳು ಒಂದು ಕುತ್ತಿಗೆಯಿಂದ ಒಟ್ಟಾಗಿವೆ. ಒರಿಸ್ಸಾ ದೇವಾಲಯದಲ್ಲಿನ ಜಗ್‌ಮೋಹನ ರಚನೆಯ ಸಂಕ್ಷಿಪ್ತ ರೂಪ ಇದು. ಎರಡು ಪಕ್ಕಗಳಲ್ಲಿ ಬಾಗಿಲುಗಳಿರುವ ಈ ಭಾಗವನ್ನು ಭಜನೆ ಹಾಡುವುದಕ್ಕೆ ಉಪಯೋಗಿಸಲಾಗುತ್ತದೆ.

## ಪ್ರದಕ್ಷಿಣ ಪಥ



ದೇವದರ್ಶನವಾದ ಅನಂತರ ಜಗ್‌ಮೋಹನದ ಪಕ್ಕದ ಬಾಗಿಲುಗಳಿಂದ ಗರ್ಭಗುಡಿಯ ಸುತ್ತ ಪ್ರದಕ್ಷಿಣ ಪಥಕ್ಕೆ ಬರಬೇಕು. ಇದು ಚೈತ್ಯಗಳ ಅಥವಾ ಸಂತ ಪೀಟರ್ ಕೆಥೆಡ್ರಲ್‌ನ ನೆನಪು ತರುತ್ತದೆ. ನಂದಲಾಲ ಬಸು ರಚಿಸಿದ ಜಾಲಂದರ ಕೆಲಸದ ನವಗ್ರಹ ಪ್ರತಿಮೆಗಳು ಈ ಪ್ರದಕ್ಷಿಣ ಪಥದ ಸೊಬಗನ್ನು ಹೆಚ್ಚಿಸಿವೆ. ಹಿಂದೂ ದೇವಾಲಯಗಳ ಹೊರಗೋಡೆಗಳಲ್ಲಿಯೂ ಇಂತಹ ಪ್ರತಿಮೆಗಳಿರುವುದು ಸಾಮಾನ್ಯ.

## ಗರ್ಭಗುಡಿಯ ಮೇಲ್ಛಾವಣಿ

ಗರ್ಭಗುಡಿಯ ಸುತ್ತಿನ ಪ್ರದಕ್ಷಿಣ ಪಥದಲ್ಲಿ ಹೊರಟಾಗ ಮೇಲ್ಭಾಗದಲ್ಲಿ ಕಾಣುವ, ವಿವಿಧ ಹಂತಗಳಲ್ಲಿರುವ ಅಲಂಕಾರಿಕ ಮಂಟಪಗಳು, ಗುಮ್ಮಟಗಳು ಪಿರಮಿಡ್ ಆಕಾರದಲ್ಲಿ ಇವೆ. ಕೇಂದ್ರದಲ್ಲಿನ ಮುಖ್ಯ ಗುಮ್ಮಟವು ಫ್ಲಾರೆನ್ಸಿನ ಎಸ್. ಮೇರಿಯಾ ಡೆಲ್ ಫಿಯೋರ್‌ನ ಗುಮ್ಮಟದಂತಿದೆ. ಬಂಗಾಳದ ದೇವಾಲಯಗಳ ಚಾವಣಿಯಂತೆ ಬಾಗಿರುವ ಅಲಂಕಾರಿಕ ಮಂಟಪಗಳು ಮತ್ತು ಎಂಟು ಗುಮ್ಮಟಗಳ ಮಧ್ಯೆ ಇರುವ ಎತ್ತರದ ಮುಖ್ಯ



ಗುಮ್ಮಟವು ಆಲ್ವಾರಿನ ಸಮಾಧಿಗೃಹವೊಂದರ ಗುಮ್ಮಟಗಳ ಸಮೂಹದ ಪರಿಣಾಮವನ್ನೆ ಹೊಂದಿದ್ದರೂ, ಇಲ್ಲಿನ ಮುಖ್ಯ ಗುಮ್ಮಟವು ಹೆಚ್ಚು ಎತ್ತರವಾಗಿದೆ.

ಮುಖ್ಯ ಗುಮ್ಮಟವು ನೀಳವಾದ ಉಬ್ಬು ದಿಂಡುಗಳ ಪರಿಧಿ ಹೊಂದಿದೆ. ಉಬ್ಬುದಿಂಡುಗಳ ತುದಿಯಲ್ಲಿ ಆಮಲಕ ಎನ್ನುವ ಮುಂಡಸೆಯ ಕಲ್ಲು ಇದ್ದು, ಅದರ ಮೇಲೆ ಕವುಚಿದ ಕಮಲದ ಹೂ ಇದೆ. ಈ ಆಮಲಕಕಿರೀಟ ಗೋಪುರವನ್ನು ಭುವನೇಶ್ವರದ ದೇವಾಲಯಗಳಲ್ಲಿ ಕಾಣಬಹುದು. ಮುಖ್ಯ ಗುಮ್ಮಟದ ಸಣ್ಣ ಪ್ರತಿಕೃತಿಗಳಾದ ಕಿರುಗೋಪುರಗಳು ಒಟ್ಟು ಹನ್ನೆರಡು ಇವೆ.

## ಪಾರ್ಶ್ವ ಪ್ರವೇಶ

ಪ್ರದಕ್ಷಿಣಪಥದ ವೇದಿಕೆಯಲ್ಲಿ ನಡೆಯುತ್ತ, ನಾವು ನಾಟ್ಯಮಂದಿರದ ಪಕ್ಕದ ಪ್ರವೇಶದ್ವಾರದ ಹೊರಗಿನ ಸೊಬಗಿನಿಂದ ಆಕರ್ಷಿತರಾಗುತ್ತೇವೆ. ಬಾಗಿಲ ಪಕ್ಕದ ಎರಡು ಗೋಡೆಗಂಬಗಳು, ಪಿರಮಿಡ್ ಆಕಾರದ ಚಾಚುತೊಲೆ ಮತ್ತು ಪಕ್ಕದ ಕಂಬಗಳು ಇವು ಗ್ವಾಲಿಯರ್ ಕೋಟೆಯ ಮಾನಮಂದಿರದ ಗಜದ್ವಾರವನ್ನು ಹೋಲುತ್ತವೆ. ಕಂಬಗಳ ಮೇಲಿನ ಕೆತ್ತನೆ ಕೆಲಸಕ್ಕೂ ರಾಜಸ್ಥಾನದ ಚಿತ್ತೂರಿನ ಅರಮನೆಯ ಕೆತ್ತನೆಯ ಕೆಲಸಕ್ಕೂ ಹೋಲಿಕೆಗಳಿವೆ.



ಪೂರ್ವ ಮತ್ತು ಪಶ್ಚಿಮ ದ್ವಾರಗಳ ಮೇಲೆ ರಕ್ಷಕ ದೇವತೆಗಳಾಗಿ ಶ್ರೀಗಣೇಶ ಮತ್ತು ಶ್ರೀಮಹಾವೀರ ಹನುಮಾನ್ ವಿಗ್ರಹಗಳು ಅಲಂಕೃತಗೊಂಡಿವೆ.

## ಸ್ಮಾರಕ

ಸ್ಮಾರಕವನ್ನು ನೋಡಿ ಹಿಂದಿರುಗುವಾಗ, ಈ ದೇವಾಲಯದಲ್ಲಿ ಬಳಸಲಾದ ವಾಸ್ತುಶಿಲ್ಪದ ವಿವಿಧ ರೂಪಗಳು, ಶೈಲಿ, ವಸ್ತುಗಳು ಮತ್ತು ಕುಸುರಿ ಕೆಲಸಗಳು ಎಷ್ಟು ಚೆನ್ನಾಗಿ ಒಂದಕ್ಕೊಂದು ಹೊಂದಿಕೊಂಡು ಸಮನ್ವಿತವಾಗಿವೆ ಎಂಬ ಅಂಶ ಸಂದರ್ಶಕರನ್ನು ವಿಸ್ಮಯಗೊಳಿಸುತ್ತದೆ, ಮತ್ತು ಶ್ರೀರಾಮಕೃಷ್ಣರ ಸಮನ್ವಯ ಭಾವವನ್ನು ನೆನಪಿಸುತ್ತ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನು ಉಂಟುಮಾಡುತ್ತದೆ. ದೈವೀಕೃಪೆಯ ರಕ್ಷಣೆ ನೀಡುವ ಕೋಟೆಯನ್ನು (ಅಥವಾ ಆಧ್ಯಾತ್ಮಿಕ ಅರಮನೆಯನ್ನು) ಪ್ರವೇಶಿಸುತ್ತಿರುವ ಭಾವನೆಯನ್ನು ಈ ದೇವಾಲಯದ ಪೂರ್ಣ ರೂಪವು ನೀಡುತ್ತದೆ. ಭಗವಾನ್ ಬುದ್ಧ, ಏಸು ಕ್ರಿಸ್ತ, ಶ್ರೀಕೃಷ್ಣ ಮೊದಲಾದ ಪ್ರವಾದಿಗಳು ಮತ್ತು ಸಂತರ ಸುತ್ತ ನಿರ್ಮಿತವಾದ ಸಂಸ್ಕೃತಿಗಳನ್ನು ಪ್ರತಿನಿಧಿಸುವ ವಾಸ್ತುಶಿಲ್ಪವನ್ನು ಹೊಂದಿರುವ ಈ ದೇವಾಲಯದ ಸೊಬಗು ಶ್ರೀರಾಮಕೃಷ್ಣರ ದಿವ್ಯ ಸಾನ್ನಿಧ್ಯದಿಂದ ನೂರ್ಮಡಿಯಾಗಿದೆ. ದೇವರನ್ನು ತಲುಪಲು ಸ್ವಲ್ಪವಾದರೂ ಪ್ರಯತ್ನಪಡಬೇಕೆಂಬುದನ್ನು ಸೂಚಿಸುವಂತೆ (ಅಡಿಪಾಯ ಕೆಳಗಿದ್ದರೂ) ದೇವಸ್ಥಾನವನ್ನು ಒಂದೂ ಮುಕ್ಕಾಲು ಮೀಟರ್ ಎತ್ತರದ ವೇದಿಕೆಯ ಮೇಲೆ ಸ್ಥಾಪಿಸಲಾಗಿದ್ದು, ವ್ಯಕ್ತಿಗತ ನೋಟಕ್ಕೆ ಇದು ಖಜುರಾಹೋದ ಖಂಡೇರಾಯ ದೇವಸ್ಥಾನವಂತೆ ಇದೆ.

ವಿಶ್ವಭಾವೈಕ್ಯದ ಪ್ರತೀಕದಂತಿರುವ ಈ ದೇವಾಲಯವು ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಕ್ಕೆ ಅತ್ಯುತ್ಕೃಷ್ಟ ಸ್ಮಾರಕವಾಗಿ ಕಂಗೊಳಿಸುತ್ತಿದೆ, ಅವರ ದಿವ್ಯ ಸಾನ್ನಿಧ್ಯಕ್ಕೆ ಯೋಗ್ಯ ಹಿನ್ನೆಲೆಯನ್ನು ಕಲ್ಪಿಸಿದಂತಿದೆ. ◆

### ಬೇಲೂರು ಮಠದ ಬಗ್ಗೆ ವಿವೇಕಾನಂದರು ಹೇಳಿದ ಮಾತುಗಳು

ವಿಶ್ವಸಹಿಷ್ಣುತೆಯ ಈ ಕೇಂದ್ರದಿಂದ, ವಿಶ್ವವ್ಯಾಪಿಯಾಗುವ ಸತ್ಸಂಕಲ್ಪ, ಶಾಂತಿ ಮತ್ತು ಸಾಮರಸ್ಯಗಳ ಪ್ರಕಾಶಮಯ ಸಂದೇಶ ಹೊರಹೊಮ್ಮುವುದು. ಭಗವಂತನ ಇಚ್ಛೆ ಇದ್ದರೆ ಈ ಮಠವನ್ನು ಸಮನ್ವಯದ ಅತಿ ದೊಡ್ಡ ಕೇಂದ್ರವನ್ನಾಗಿ ಮಾಡುವೆವು... ಅಂದು, ನಾವು ಶ್ರೀರಾಮಕೃಷ್ಣರ ಮೂರ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ ದಿನದಂದು, ಅವರ ಭಾವನೆಗಳು ಇಲ್ಲಿಂದ ಹೊರಟು ತಮ್ಮ ಪ್ರಕಾಶದಿಂದ ಇಡೀ ಪ್ರಪಂಚವನ್ನೇ ಬೆಳಗುವುದನ್ನು ನಾನು ಕಂಡೆ.